**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕುಂದಾಪುರ.**

**ಪಿಡಬ್ಲ್ಯೂ:3**

**ಎಸ್.ಸಿ. ಸಂಖ್ಯೆ: 548/2025 ಪಿಡಬ್ಲ್ಯೂ:4**

**ಸಾಕ್ಷಿದಾರರ ಹೆಸರು** : ಮಹಾಬಲ ಕುಲಾಲ್

**ತಂದೆ ಹೆಸರು** : ಕೊರಗ ಕುಲಾಲ್

**ವಯಸ್ಸು** : **50**

**ವೃತ್ತಿ** : ಕೃಷಿ

**ವಾಸ** : ಎಡಗೇರಿ, ಹಳ್ಳಿಹೊಳೆ ಗ್ರಾಮ

**ದಿನಾಂಕ: 11-05-2026 ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ**

ನನಗೆ ಕೇಶವ ಯಡಿಯಾಳ ಮತ್ತು ಅವರ ಕುಟುಂಬದವರ ಪರಿಚಯ ಇದೆ ನಾನು ಈ ಮೊದಲು ಅವರ ಮನೆಗೆ ಕೂಲಿ ಕೆಲಸಕ್ಕೆ ಹೋಗುತ್ತಿದ್ದೆ. ಕೇಶವ ಯಡಿಯಾಳರ ಮನೆಯಲ್ಲಿ ಏನು ಆಗಿದೆ ಎಂದು ನನಗೆ ಗೊತ್ತಿಲ್ಲ. ನಾನು ಕಾಡಿಗೆ ಸೊಪ್ಪಿಗೆ ಹೋದಾಗ ಯಾವುದೇ ನಕ್ಸಲರ ಗುಂಪನ್ನು ನೋಡಿರುವುದಿಲ್ಲ. ನನಗೆ ಪೋಲೀಸರು ಯಾವುದೇ ನಕ್ಸಲರ ಛಾಯಾಚಿತ್ರದ ಯಾದಿಯನ್ನು ತೋರಿಸಿರುವುದಿಲ್ಲ. ಮತ್ತು ನಾನು ಯಾವುದೇ ನಕ್ಸಲರನ್ನು ನೋಡಿ ಗುರುತಿಸಿ ಪೋಲೀಸರಿಗೆ ಹೇಳಿಕೆ ನೀಡಿರುವುದಿಲ್ಲ.

ಪೋಲೀಸರು ನನಗೆ ಯಾವುದೇ ವ್ಯಕ್ತಿಯನ್ನು ಯಡಿಯಾಳರ ಮನೆಯಲ್ಲಿ ತೋರಿಸಿದ್ದು ಇರುವುದಿಲ್ಲ. ನಾನು ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ಸಾಕ್ಷಿ ನ್ಯಾಯಾಲಯದ ಮುಂದೆ ವಿ ಸಿ ಮುಖಾಂತರ ಹಾಜರುಪಡಿಸಿದ ಆರೋಪಿತನನ್ನು ನೋಡಿ ಗುರುತಿಸಿರುವುದಿಲ್ಲ.

(ಸಾಕ್ಷಿಯು ಸಂಪೂರ್ಣ ಪ್ರತಿಕೂಲ ಸಾಕ್ಷಿಯಾದ ಕಾರಣ ಆತನನ್ನು ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿಯನ್ನು ಕೋರಿರುತ್ತಾರೆ. ಆ ಬಗ್ಗೆ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ

ಕಾಡಿನಿಂದ ಸೊಪ್ಪು ತಂದು ಕೇಶವ ಯಡಿಯಾಳರ ತೋಟಕ್ಕೆ ಹಾಕುವ ಕೂಲಿ ಕೆಲಸವನ್ನು ನಾನು ಮಾಡುತ್ತಿದ್ದು ದಿಃ12-01-2005 ರಂದು ಬೆಳಿಗ್ಗೆ 7.15 ಗಂಟೆ ಸಮಯಕ್ಕೆ ಕೇಶವ ಯಡಿಯಾಳರ ಅಂಗಳದಲ್ಲಿ ಕೆಲವು ವ್ಯಕ್ತಿಗಳು ಬ್ಯಾಗ್ ಗಳನ್ನು ನೇತು ಹಾಕಿಕೊಂಡು ಕೋವಿಗಳನ್ನು ಹಿಡಿದುಕೊಂಡು ಕೇಶವ ಯಡಿಯಾಳರ ಮನೆಯವರಿಗೆ ಜೀವ ಬೆದರಿಕೆ ಹಾಕಿದ ವಿಷಯ ನನಗೆ ತಿಳಿದಿದೆ ಎಂದರೆ ಸರಿ ಅಲ್ಲಾ. ನಾನು ಕಾಡಿಗೆ ಸೊಪ್ಪಿಗೆ ಹೋಗುತ್ತಿರುವಾಗ ಸದ್ರಿ ನಕ್ಸಲರ ಗುಂಪು ಹಳ್ಳಿಹೊಳೆಯಲ್ಲಿ ಆಗಾಗ ಕಂಡು ಬರುತ್ತಿದ್ದು, ದಿಃ12-01-2005 ರಂದು ಕೇಶವ ಯಡಿಯಾಳ ಅಂಗಳಕ್ಕೆ ಬಂದಿದ್ದ ನಕ್ಸಲರನ್ನು ಪೋಲೀಸರು ತೋರಿಸಿದ ನಕ್ಸಲರ ಫೋಟೋಗಳ ಯಾದಿಯಲ್ಲಿ ಗುರುತಿಸಿರುತ್ತೇನೆ ಎಂದರೆ ಸರಿ ಅಲ್ಲಾ. ಸದ್ರಿ ನಕ್ಸಲರ ಯಾದಿಯಲ್ಲಿ ನಾನು ಮಹೇಶ, ಪ್ರದೀಪ, ಹೊರಳೆ ಸರೋಜಾ, ವಿಕ್ರಮ್ ಗೌಡ, ವಸಂತ ಬಿ ಜಿ ಕೃಷ್ಣಮೂರ್ತಿ ಮತ್ತು ನೀಲಗುಳಿ ಪದ್ಮನಾಭ ರವರನ್ನು ಗುರುತಿಸಿ ಸದ್ರಿಯವರು ಕೈಯಲ್ಲಿ ಕೋವಿ ಹಿಡಿದು ಸರಕಾರದ ನಿಷೇಧಿತ ಸಂಘಟನೆಯೊಂದಿಗೆ ಸೇರಿಕೊಂಡು ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುತ್ತಾರೆ ಎಂದು ದಿನಾಂಕಃ09-05-2009 ರಂದು ನನಗೆ ಈಗ ಓದಿ ಹೇಳಿದಂತೆ ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ ಅಲ್ಲಾ. ಸದ್ರಿ ಹೇಳಿಕೆಯನ್ನು ನಿಪಿ-7 ಎಂದು ಗುರುತಿಸಲಾಯಿತು.

ದಿನಾಂಕಃ18-03-2025 ರಂದು ನನಗೆ ಶೇಷಾಚರ ಯಡಿಯಾಳ ಮನೆಯಲ್ಲಿ ಪೋಲೀಸರು ಆರೋಪಿ ಮಹೇಶ ಯಾನೆ ಮಾಧವ ಯಾನೆ ಜಾನ್ ಇವನನ್ನು ಕರೆದುಕೊಂಡು ಬಂದಿದ್ದು, ನಾನು ಆತನನ್ನು ನೋಡಿ ಗುರುತಿಸಿ ಆ ವ್ಯಕ್ತಿ ಹಿಂದೆ 2005 ರಲ್ಲಿ ಯಡಿಯಾಳರ ಮನೆಗೆ ಬಂದು ಬೆದರಿಕೆ ಹಾಕಿದವನು ಹಾಗೂ 2009 ರಲ್ಲಿ ಪೋಲೀಸರು ತೋರಿಸಿದ್ದ ಭಾವಚಿತ್ರಗಳ ಯಾದಿಯಲ್ಲಿ ನಾನು ನೋಡಿ ಗುರುತಿಸಿದ ವ್ಯಕ್ತಿಯಾಗಿರುತ್ತಾನೆ ಎಂದು ದಿನಾಂಕಃ18-03-2025 ರಂದು ನನಗೆ ಈಗ ಓದಿ ಹೇಳಿದಂತೆ ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ ಅಲ್ಲಾ. ಸದ್ರಿ ಹೇಳಿಕೆಯನ್ನು ನಿಪಿ-8 ಎಂದು ಗುರುತಿಸಲಾಯಿತು.

ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲಾ.

**<u>ಪಾಟೀ ಸವಾಲುಃ</u> <u>ಆರೋಪಿ ಪರ ಶ್ರೀ ಎಂ ಆರ್ ಕೆ ಟಿ ವಕೀಲರಿಂದ</u>**

ದಿನಾಂಕಃ17-03-2025 ರಂದು ಪೋಲೀಸರು ನನಗೆ ಯಾವುದೇ ವ್ಯಕ್ತಿಯನ್ನು ತೋರಿಸಿಲ್ಲ ಎಂದರೆ ಸರಿ. ನ್ಯಾಯಾಲಯದ ಮುಂದೆ ವಿ ಸಿ ಮುಖಾಂತರ ಹಾಜರುಪಡಿಸಿದ ಆರೋಪಿತನನ್ನು ಇವತ್ತೇ ನಾನು ಪ್ರಥಮ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

<u>ಮರು ವಿಚಾರಣೆಃ</u> ಇಲ್ಲ.

(ನನ್ನ ಉಕ್ತಲೇಖನದಂತೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೆ ಸರಿ ಇದೆ.

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಕುಂದಾಪುರ**